**<u>ದಿನಾಂಕಃ 21-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು</u>**

**<u>ಪಾಟೀ ಸವಾಲು 1 ನೇ ಪ್ರತಿವಾದಿ ಪರ ಶ್ರೀ ಸಿ.ಆರ್‌.ಎಸ್‌. ವಕೀಲರಿಂದಃ</u>**

1. ವಾದಿಯು 1 ನೇ ಪ್ರತಿವಾದಿಯ ವಿರುದ್ಧ ದಾವೆ ಸಲ್ಲಿಸಿರುತ್ತಾರೆ. ದಾರಿ ವಿಷಯವಾಗಿ ದಾವೆ ಸಲ್ಲಿಸಿರುತ್ತಾರೆ. ವಾದಿಯ ಮನೆತನದ ಬಗ್ಗೆ ಮಾಹಿತಿ ಇರುತ್ತದೆ. ವಾದಿಯ ಮನೆತನಕ್ಕೆ ಎಷ್ಟು ಜಮೀನುಗಳು ಇರುತ್ತವೆ ಎಂದು ನನಗೆ ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿಯರು ಎಷ್ಟು ತಲೆಮಾರಿ ವಂಶಸ್ಥರು ಎಂದು ಹೇಳಲು ಬರುವುದಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಬರೆಯಲು ವಾದಿ, ಪ್ರತಿವಾದಿಯರು ಮತ್ತು ಊರಿನವರು ಸೇರಿ ಮಾಹಿತಿ ನೀಡಿರುತ್ತಾರೆ. ಸದರಿಯವರು ಊರಿನಲ್ಲಿ ಮಾಹಿತಿ ನೀಡಿರುತ್ತಾರೆ. ಸದರಿಯವರು ನೀಡಿದ ಮಾಹಿತಿ ಬಾಂಡ ಬಗ್ಗೆ ನೀಡಿರುತ್ತೇನೆ. ನನ್ನ ಪ್ರಮಾಣ ಪತ್ರದಲ್ಲಿ ಬರೆಯಲು ನಾನೇ ಮಾಹಿತಿ ನೀಡಿರುತ್ತೇನೆ.

2. ನನ್ನ ಪ್ರಮಾಣ ಪತ್ರದಲ್ಲಿ ವಾದಿ ಪ್ರತಿವಾದಿಯರ ವಂಶಸ್ಥರು ಬಗ್ಗೆ ಗೊತ್ತಿರುತ್ತದೆ ಎಂದು ಬರೆಸಿದ್ದು ನನ್ನ ಸಾಕ್ಷಿದಲ್ಲಿ ವಾದಿ ಮತ್ತು ಪ್ರತಿವಾದಿಯರು ಎಷ್ಟು ತಲೆಮಾರಿ ವಂಶಸ್ಥರು ಎಂದು ಹೇಳಲು ಬರುವುದಿಲ್ಲ ಎಂದು ಸಾಕ್ಷಿ ನುಡಿದಿದ್ದು ಯಾವುದು ಸರಿ ಎಂಬ ಪ್ರಶ್ನೆಗೆ ಸಾಕ್ಷಿಯು ಪ್ರಮಾಣ ಪತ್ರದಲ್ಲಿ ಬರೆದ ಸಂಗತಿ ಸರಿಯಾಗಿ ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ಸರ್ವೆ ನಂಬರಗಳನು ಬರೆಸಿರುತ್ತೇನೆ. ಸರ್ವೆ ನಂ.55/1 ಎ ಇದು ತಿಪ್ಪಣ್ಣ, ಮಾಯಪ್ಪ, ಶರಣಪ್ಪ ರವರ ಹೆಸರಿನಲ್ಲಿ ಇದ್ದು, ಸದರಿಯವರು ವಿಭಾಗ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸರ್ವೆ ನಂ.55/1 ಎ ಮೇಲ್ಕಾಣಿಸಿದ ಹೆಸರಿನಲ್ಲಿ ಇರುತ್ತದೆ.

3. ಸರ್ವೆ ನಂ.55/1 ಎ ಪಶ್ಚಿಮ ದಿಕ್ಕಿಗೆ ರಸ್ತೆ ನೀಡಬೇಕೆಂದು ಬರೆಸಲಾಗಿರುತ್ತದೆ. ಸರ್ವೆ ನಂ.55/2 ಮತ್ತು 55/3 ಇದು ಯಾರ ಹೆಸರಿನಲ್ಲಿ ಇರುತ್ತದೆ ಎಂದು ನನಗೆ ಮಾಹಿತಿ ಇರುವುದಿಲ್ಲ. ಸದರಿ ಜಮೀನಿನಲ್ಲಿ ಯಾವ ಸರ್ವೆ ನಂಬರದಿಂದ ಯಾವ ಸರ್ವೆ ನಂಬರಿಗೆ ಹೋಗಬೇಕೆಂದು ಬರೆಸಲಾಗಿರುತ್ತದೆ ಎಂದರೆ ಸಾಕ್ಷಿಯು ಸರ್ವೆ ನಂ. 55 ರ ಬಗ್ಗೆ ಮಾತ್ರ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ.

4. ತಡಲಗಿಯಿಂದ ನಾಗದಿನ್ನಿಗೆ ಹೋಗುವ ರಸ್ತೆ ಇರುತ್ತದೆ. ತಡಲಗಿ ರಸ್ತೆಗೆ ಹೊಂದಿಕೊಂಡು ಸರ್ವೆ ನಂ.55/2 ಇರುತ್ತದೆ ಎಂದರೆ ಸರಿ. ಸರ್ವೆ ನಂ.55/2 ರ ಮಾಲೀಕನು ತಡಲಗಿ ರಸ್ತೆಯ ಮೂಲಕ ಹಾದುಹೋಗುತ್ತಾನೆ ಎಂದರೆ ಸರಿ. ಸರ್ವೆ ನಂ.55/2 ರ ದಕ್ಷಿಣ ದಿಕ್ಕಿನಲ್ಲಿ ಕೆನಾಲ ಹಾದುಹೋಗಿರುತ್ತದೆ. ಸರ್ವೆ ನಂ.55/2 ಕ್ಕೆ ಹೊಂದಿಕೊಂಡು ಕೆನಾಲ ಇದ್ದು, ಕೆನಾಲಿಗೆ ಎರಡು ಬದಿ ರಸ್ತೆ ಇರುತ್ತದೆ ಎಂದರೆ ಸರಿಯಲ್ಲ.

5. ಸರ್ವೆ ನಂ.55/3 ರಲ್ಲಿ ಪಶ್ಚಿಮ ದಿಕ್ಕಿಗೆ ನೀರಿನ ಹೊಂಡ ನಿರ್ಮಿಸಿರುತ್ತಾರೆ ಎಂದರೆ ಸರಿ. ಸರ್ವೆ ನಂ.55/3 ತನ್ನ ಜಮೀನಿಗೆ ನೀರು ಹಾಯಿಸಿಕೊಳ್ಳಲು ನೀರನ್ನು ಸಂಗ್ರಹಿಸಿರುತ್ತಾನೆ ಎಂದರೆ ಸರಿ. ಹೊಂಡ ಎಷ್ಟು ಫೂಟ ಇರುತ್ತದೆ ಎಂದರೆ ನನಗೆ ಹೇಳಲು ಬರುವುದಿಲ್ಲ. ಅಂದಾಜು 50X40 ಇರುತ್ತದೆ ಎಂದರೆ ಇರಬಹುದು ಎಂದು ನುಡಿಯುತ್ತಾರೆ. ಅದರ ಎತ್ತರ ಅಂದಾಜು 7-8 ಫೂಟ ಇರುತ್ತದೆ ಎಂದರೆ ಸಾಕ್ಷಿಯು 4-5 ಫೂಟ ಇರುತ್ತದೆ ಎಂದು ನುಡಿಯುತ್ತಾರೆ. ಹೊಂಡ ಸೀಮಿಗೆ ಹೊಂದಿಕೊಂಡಿರುತ್ತದೆ ಎಂದರೆ ಸಾಕ್ಷಿಯು ದಾರಿ ಬಿಟ್ಟು ಇರುತ್ತದೆ ಎಂದು ನುಡಿಯುತ್ತಾರೆ. ಹೊಂಡದ ಪಶ್ಚಿಮ ದಿಕ್ಕಿಗೆ ದಾರಿ ಇರುತ್ತದೆ. ದಾರಿಗೆ ಹೊಂದಿಕೊಂಡು ಹಣಮಂತ ಉಣ್ಣಿಬಾವಿ ರವರ ಜಮೀನು ಇರುತ್ತದೆ. ಸದರಿ ಜಮೀನಿನ ಸರ್ವೆ ನಂಬರ ಹೇಳಲು ಬರುವುದಿಲ್ಲ.

6. ವಾದಿಯು ಹಾಜರುಪಡಿಸಿದ ನಕಾಶೆಯನ್ನು ನಾನು ನೋಡಿರುವುದಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ನಕಾಶೆ ಗುರುತಿಸಿದ ಬಗ್ಗೆ ನೋಡಿರುತ್ತೇನೆ ಎಂದು ಬರೆಸಿರುವ ಸಂಗತಿಗಳು ತಪ್ಪಾಗಿರುತ್ತದೆ ಎಂದು ನುಡಿಯುತ್ತಾರೆ. 1ನೇ ವಾದಿಯು ತನ್ನ ಬೇರೆ ಯಾರ ಪರವಾಗಿ ದಾವೆ ಸಲ್ಲಿಸಿರುತ್ತಾನೆ ಎಂದು ನನಗೆ ಗೊತ್ತಿಲ್ಲ. ಸದರಿ ವಿಷಯವನ್ನು ನನ್ನ ಪ್ರಮಾಣ ಪತ್ರದಲ್ಲಿ ಬರೆಸಲಾಗಿರುತ್ತದೆ ಎಂದರೆ ತಪ್ಪಾಗಿ ನಮೂದಿಸಲಾಗಿರುತ್ತದೆ ಎಂದು ನುಡಿಯುತ್ತಾರೆ.

7. ಸಾಮಾನ್ಯವಾಗಿ ಕುಟುಂಬದ ಸದಸ್ಯರಲ್ಲಿ ಪಾಲು ವಾಟ್ನಿಯಾದರೆ ರಸ್ತೆ ಯಾರ ಜಮೀನಿನಿಂದ ಯಾರ ಜಮೀನಿಗೆ ಮತ್ತು ಹೇಗೆ ಹೋಗಬೇಕೆಂದು ನಮೂದಿಸಲಾಗುತ್ತದೆ ಎಂದರೆ ಸರಿ. ಸರ್ವೆ ನಂ.55 ರ ಡ್ಮೈರಿ ಆಗಿರುವುದಿಲ್ಲ. ಸರ್ವೆ ನಂ.55/1, 55/2, 55/3 ಕ್ಕೆ ರಸ್ತೆಗೆ

ಹೊಂದಿಗೊಂಡಿರುವ ಕಾರಣ ಡೈರಿ ನೋಂದಣಿಯನ್ನು ಮಾಡಿಕೊಂಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.55/3 ರ ಮಾಲೀಕನಿಗೆ ತೊಂದರೆ ಕೊಡುವ ಉದ್ದೇಶದಿಂದ ವಾದಿಯು ಸುಳ್ಳು ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ಶ್ರೀ ಅಮಿತ್ ಘಟ್ಟಿ)**
**ದಿವಾಣಿ ನ್ಯಾಯಾಧೀಶರು ಮತ್ತು**
**ನ್ಯಾಯಿಕ ದಂಡಾಧಿಕಾರಿಗಳು**
**ಬಸವನ ಬಾಗೇವಾಡಿ.**